ಅಥವಾ ಅಲ್ಲಿ ಖೈದಿಗಳಿಗೂ ಕೂಡ ಆಹಾರಧಾನ್ಯಗಳು ಸಿಗುವುದಕ್ಕೆ ಸಮಸ್ಯೆ ಉಂಟಾಗಿದೆ. ಇದಕ್ಕೆ ಪರಿಹಾರ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ.?

ಶ್ರೀ ವಿ. ಸೋಮಣ್ಣ : ಪುಡ್ ಕಂಟ್ರೋಲ್ ಕಮಾಡಿಟಿಸ್ ನಮಗೆ ಏನು ಇದ್ದರೂ ಅದು ಕಡಿತ ಆಗಿರುವುದು ನಮಗೆ ಗೊತ್ತಿದೆ. ಆದರೆ ಖೈದಿಗಳಿಗೆ ಕೊಡುತ್ತಿರುವ ಊಟದಲ್ಲಿ ನಾವು ಕಡಿತ ಮಾಡಿಲ್ಲ. ಹಾಗೆ ಏನಾದರೂ ತಮ್ಮ ಗಮನಕ್ಕೆ ಬಂದಾಗ ತಿಳಿಸಿದರೆ ನಾವು ಕ್ರಮ ಕೈಗೊಳ್ಳುತ್ತೇವೆ. ಮತ್ತೆ ಈ ಹಳೇ ಕಟ್ಟಡ ಏನು ಇದೆ, ಇದನ್ನು ಸ್ಥಳಾಂತರ ಮಾಡಿ ಇದನ್ನು ಸಾರ್ವಜನಿಕರ ಉಪಯೋಗಕ್ಕೆ ಆ ಜಾಗ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಅವರು ಹೇಳಿದ್ದು ಕಟ್ಟಡದ ಅಸಮರ್ಪಕತೆಯಿಂದ ಖೈದಿಗಳು ಪರಾರಿ ಆಗುತ್ತಾ ಇಲ್ಲ. ಅವರನ್ನು ಹಾಸ್ಪೆಟ್‌ಲಿಗೋ ಮತ್ತೊಂದು ಕಡೆಗೆ ಕರೆದುಕೊಂಡು ಹೋಗುವ ವೇಳೆಯಲ್ಲಿ ಹಾದಿಯಲ್ಲಿ ತಪ್ಪಿಸಿಕೊಂಡು ಹೋಗುತ್ತಾರೆ. ಅಂದರೆ ಅವರು ಪರೋಕ್ಷವಾಗಿ ಹೇಳುವಂತದ್ದು ನಿಮ್ಮ ಜೈಲು ಅಧಿಕಾರಿಗಳು ಯಾರು ಇದ್ದಾರೆ ಅವರು ಸ್ವಲ್ಪ ಅಲಕ್ಷ್ಯ ಮಾಡುತ್ತಿರುವುದರಿಂದ ಇವರು ಪರಾರಿಯಾಗುತ್ತಾರೆ. ಈಗಾಗಲೇ ಕ್ರಮ ತೆಗೆದುಕೊಳ್ಳುವೆಂದು ಉತ್ತರದಲ್ಲಿ ಹೇಳಿದ್ದಿರೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತಾರೆ. ಆ ಪ್ರಶ್ನೆ ಅಲ್ಲಿಗೆ ಮುಗಿದಿರುತ್ತದೆ.

ಸಕಲೇಶಪುರದ ಹೇಮಾವತಿ ಸೇತುವೆ ಬಳಿ ಭೂಮಿ ಕೊರೆತ.

243 (2046)-ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಸಕಲೇಶಪುರ ನಗರದ ಹೇಮಾವತಿ ಸೇತುವೆ ಪಕ್ಕ ಭೂಮಿ ಕೊರೆತ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

2) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು)

1) ಬಂದಿದೆ.

2) ಕೊರೆತವನ್ನು ತಡೆಯಲು ಮತ್ತು ಆಗಿರುವ ಭೂ ಕೊರೆತವನ್ನು ಮುಚ್ಚಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಬಿ. ಬಿ. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಸಕಲೇಶಪುರದಲ್ಲಿ ನಗರದ ಹೇಮಾವತಿ ನಾಲೆಯ ಕೊರೆತ ಆಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ಬಂದಿದೆ ಎಂದು ಹೇಳಿದ್ದಾರೆ. ಕ್ರಮ ಏನು ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದಕ್ಕೆ ಭೂ ಕೊರೆತವನ್ನು ಮುಚ್ಚಲು ಕ್ರಮ ತೆಗೆದುಕೊಳ್ಳಲಾಗಿದೆ. ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಸರ್ಕಾರದ ಗಮನಕ್ಕೆ ಯಾವಾಗ ಬಂದಿದೆ, ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಮತ್ತು ಯಾವಾಗ ಪ್ರಾರಂಭವಾಗಿದೆ ಇಷ್ಟನ್ನು ತಿಳಿಸಬೇಕು.

ಶ್ರೀ ಸಿ. ಎಂ. ಉದಾಸಿ : ಸನ್ಮಾನ್ಯ ಅಧ್ಯಕ್ಷರೆ, ಈ ಸೇತುವೆ ಸುಮಾರು ಒಂದನೂರು ವರ್ಷಗಳ ಉಕ್ಕಿನ ಸೇತುವೆ. ಇದರ ಅಬಿಟ್‌ಮೆಂಟ್‌ಗೆ ಹೊಂದಿಕೊಂಡಿರುವಂಥ ರಿಟರ್ನ್ ವಾಟರ್ ಪಕ್ಕದಲ್ಲಿ ಭೂಕುಸಿತವಾಗಿರುವುದರಿಂದ ಅದನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗಿದೆ. ಈ ಸೇತುವೆಯ ಮೇಲೆ ವಾಹನ ಸಂಚಾರವನ್ನು ನಿಷೇಧಿಸಲಾಗಿದೆ. ಸೇತುವೆ ಮೇಲೆ ಸಾರ್ವಜನಿಕರ ಸಂಚಾರಕ್ಕೂ ಕೂಡ ಒಂದು ಕಾಲುದಾರಿಯನ್ನು ನಿರ್ಮಿಸಲಾಗಿದೆ. ಸಾರ್ವಜನಿಕರಿಗೆ ಓಡಾಡಲೂ ಯಾವುದೇ ತೊಂದರೆ ಇಲ್ಲ. ವಾಹನಗಳ ಸಂಚಾರಕ್ಕೆ ಹೊಸ ಸೇತುವೆಯನ್ನು 1994ರಲ್ಲಿ ಕಟ್ಟಲಾಗಿದೆ. ಆದರೆ ಇದನ್ನು ರಿಪೇರಿ ಮಾಡುವಂತಹ ಕ್ರಮವನ್ನು ಈಗಾಗಲೇ ಕೈಕೊಳ್ಳಲಾಗಿದೆ. ಅದನ್ನು ತಮ್ಮ ಗಮನಕ್ಕೆ ತರಲು ಇಚ್ಛಿಪಡುತ್ತೇನೆ.

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಅದರ ಪಕ್ಕದಲ್ಲಿ ಒಂದು ಹೊಸ ಸೇತುವೆ ಕಟ್ಟಿರುತ್ತೀರಿ, ಇದರ ಕೊರೆತ ಪ್ರತಿ ವರ್ಷ ಜಾಸ್ತಿಯಾಗುತ್ತಿದೆ. ಈಗ ಹಳೆಯ ಸೇತುವೆಯನ್ನು ಧಾಟಿ ಹೊಸ ಸೇತುವೆಯ ಕಡೆ ಬರುತ್ತಾ ಇದ್ದಾರೆ. ತಮಗೆ ಯಾವ ರೀತಿಯ ಮಾಹಿತಿಯನ್ನು ಒದಗಿಸಿದ್ದಾರೆ ಗೊತ್ತಿಲ್ಲ, ತಕ್ಷಣ ತಾವು ಸರಿಯಾದಂಥ ಕ್ರಮ ತೆಗೆದುಕೊಳ್ಳದೆ ಇದ್ದರೆ ಈಗ ಇರುವ ಹೊಸ ಸೇತುವೆಗೂ ಕೂಡ ತೊಂದರೆಯಾಗುವ ಅವಕಾಶ ಇದೆ. ಸಹಸ್ರಾರು ವೆಹಿಕಲ್‌ಗಳು ಅದರ ಮೇಲೆ ಹೋಗುತ್ತವೆ. ಇದು ಬೆಂಗಳೂರು-ಮಂಗಳೂರು ಹೈವೇ ಆಗಿರುವುದರಿಂದ, ಭಾರಿ ಭಾರ ಹೊತ್ತುಕೊಂಡು ಹೋಗತಕ್ಕಂಥ, ಸುಮಾರು 30-40 ಟನ್ ಭಾರ ಹೊತ್ತು ಕೊಂಡು ಹೋಗತಕ್ಕಂಥ ಲಾರಿಗಳು ಓಡಾಡುತ್ತಿರುತ್ತದೆ. ಇದನ್ನು ಆದಷ್ಟು ಬೇಗನೆ ಸೂಕ್ತ ಕ್ರಮವನ್ನು ನೀವು ತೆಗೆದುಕೊಳ್ಳದೆ ಇದ್ದರೆ ಬೇರೆ ಮಾರ್ಗವೇ ಇಲ್ಲ, ಇದು ವರ್ಷ ವರ್ಷ ಜಾಸ್ತಿಯಾಗುತ್ತಿದೆ. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಸಿ. ಎಂ. ಉದಾಸಿ : ಈ ಸೇತುವೆ ಬಗ್ಗೆ ಯಾವುದೇ ಕೊರತೆ ಆಗದಂತೆ ನೋಡಿಕೊಳ್ಳುವ ಕೆಲಸವನ್ನು ಮಾನ್ಯ ಹಿರಿಯ ಸದಸ್ಯರ ಸಲಹೆಗಳನ್ನು ಗಮನಿಸುತ್ತೇನೆ.

ಬೆಂಗಳೂರು ನಗರದಲ್ಲಿ ಮೇಲು ಸೇತುವೆ ನಿರ್ಮಾಣ.

244 (2081)-ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆಯಲ್ಲಿ ಕಡಿಮೆ ಮಾಡುವ ಮೇಲು ಸೇತುವೆಗಳನ್ನು ನಿರ್ಮಾಣ ಮಾಡಲು ಸರ್ಕಾರವು ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು?

ಇ) ಈಗಾಗಲೇ ಕೈಗೆತ್ತಿಕೊಂಡಿರುವ ಮಾಲು ಸೇತುವೆಗಳ ನಿರ್ಮಾಣ ವಿವರಗಳನ್ನು ನೀಡುವುದು?

ಈ) ಪ್ರತಿಯೊಂದು ಮೇಲು ಸೇತುವೆ ನಿರ್ಮಾಣ ಮಾಡಲು ಅಗತ್ಯವಾಗುವ ಹಣ?

ಉ) ಯಾವ ಯಾವ ಮೇಲು ಸೇತುವೆಗಳು 1997ರ ಕೊನೆಯ ಹೊತ್ತಿಗೆ ನಿರ್ಮಾಣವಾಗಲಿದೆ?

ಶ್ರೀ ಅನಂತ್‌ನಾಗ್(ಬೆಂಗಳೂರು ನಗರ ಅಭಿವೃದ್ಧಿ ರಾಜ್ಯ ಸಚಿವರು)

ಅ) ಹೌದು

ಆ) ಬೆಂಗಳೂರು ನಗರದ ವಿವಿಧ ಭಾಗಗಳಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಮೇಲು ಸೇತುವೆಗಳು ವಿವರಗಳು ಈ ಕೆಳಕಂಡಂತಿವೆ:

1) ಟೌನ್‌ಹಾಲ್‌ನಿಂದ ಸಿರ್ಸಿ ವೃತ್ತದವರೆಗೆ ಮೇಲು ಸೇತುವೆ ನಿರ್ಮಾಣ

2) ಹಡ್ಸನ್ ವೃತ್ತದಿಂದ ಟೌನ್‌ಹಾಲ್‌ವರೆಗೆ ಸಬ್‌ವೇ ಸಹಿತ ಮೇಲು ಸೇತುವೆ ನಿರ್ಮಾಣ

3) ರಿಚ್‌ಮಂಡ್ ವೃತ್ತದಲ್ಲಿ ಗ್ರೇಡ್ ಸಪರೇಶನ್ ಹಾಗೂ ಮೇಲುಸೇತುವೆ ನಿರ್ಮಾಣ

4) ಮಹಾರಾಣಿ ಕಾಲೇಜಿನಿಂದ ರಾಜಾಜಿನಗರ ಪ್ರದೇಶ ದ್ವಾರದವರೆಗೆ ಕಾರಿಡಾರ್ ಅಭಿವೃದ್ಧಿ